ಹೂಳು ತುಂಬಿದ್ದು ಸೈಡ್ ಪಿಚಿಂಗ್ ಮಾಡದೇ ಇರುವ ಕಾರಣ ಪಟ್ಟಣದ ಅಭಿವೃದ್ಧಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ಕಾಮಗಾರಿಗೆ ಅನುದಾನ ಒದಗಿಸಲಾಗುವುದೇ;

ಇ) ಸದರಿ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಆರ್. ಶ್ರೀನಿವಾಸ್ (ಪೌರಾಡಳಿತ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಇದನ್ನು ಪುರಸಭೆ ನಿರ್ಧರಿಸಬೇಕು.

ಇ) ಪುರಸಭೆಗೆ ಈ ಬಗ್ಗೆ ಪರಿಶೀಲಿಸಿ ನಿರ್ಣಯ ತೆಗೆದುಕೊಳ್ಳಲು ಸೂಚಿಸಲಾಗಿದೆ.

1952 (2004) ಶ್ರೀ ಮೋಹನ್ ಪಿ.ಸಿ. (ಚಿಕ್ಕಪೇಟೆ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಸುತ್ತಮುತ್ತ ವರ್ತುಲ ರಸ್ತೆ ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಕಿ.ಮೀ. ನಿರ್ಮಿಸಲು ಉದ್ದೇಶಿಸಲಾಗಿದೆ; ಯಾವ ಯಾವ ಕಡೆಗಳಲ್ಲಿ ಈ ವರ್ತುಲ ರಸ್ತೆ ನಿರ್ಮಿಸಲಾಗುವುದು; ಯೋಜನೆಯ ಅಂದಾಜು ವೆಚ್ಚ ಎಷ್ಟು;

ಇ) ಯೋಜನೆಗೆ ಅಗತ್ಯವಿರುವ ಹಣವನ್ನು ಸಂಗ್ರಹಿಸುವ ಮೂಲ ಯಾವುವು;

ಈ) ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು, ರಸ್ತೆ ನಿರ್ಮಾಣ ಮಾಡಲು ಕಾಲಮಿತಿಯನ್ನು ನಿಗದಿಗೊಳಿಸಲಾಗಿದೆಯೇ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ) ಬೆಂಗಳೂರು ನಗರದ ಸುತ್ತಮುತ್ತ ಫರಿಫರಲ್ ರಿಂಗ್ ರಸ್ತೆ ಭಾಗ – I ಮತ್ತು ಭಾಗ – II ನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಆ) ರಸ್ತೆಯ ಒಟ್ಟು ಉದ್ದ 116 ಕಿ.ಮೀ. ಇರುತ್ತದೆ. ಪಿ.ಆರ್.ಆರ್. ಭಾಗ – 1 ರ ರಸ್ತೆಯನ್ನು ತುಮಕೂರು ರಸ್ತೆಯಿಂದ ಹಳೇ ಮದ್ರಾಸ್ ರಸ್ತೆಯ ಮಾರ್ಗವಾಗಿ ಹೊಸೂರು ರಸ್ತೆಯವರೆಗೆ ಹಾಗೂ ಪಿ.ಆರ್.ಆರ್. ಭಾಗ 2 ರ ರಸ್ತೆಯನ್ನು ಹೊಸೂರು ರಸ್ತೆಯಿಂದ ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ, ಮೈಸೂರು ರಸ್ತೆ, ಮಾಗಡಿ ರಸ್ತೆ ಮಾರ್ಗವಾಗಿ

ತುಮಕೂರು ರಸ್ತೆಯವರೆಗೆ ನಿರ್ಮಿಸಲು ಪ್ರಾಧಿಕಾರದಿಂದ ಉದ್ದೇಶಿಸಲಾಗಿದೆ. ಯೋಜನೆಯ ಒಟ್ಟು ಅಂದಾಜು ವೆಚ್ಚ ರೂ. 3600 ಕೋಟಿ ಎಂಬುದಾಗಿ ಅಂದಾಜು ಮಾಡಲಾಗಿದೆ.

ಇ) ಯೋಜನೆಯ ಭಾಗ – Iನ್ನು ಆದ್ಯತೆಯ ಮೇಲೆ ಕಾರ್ಯಗತಗೊಳಿಸಲು ನಿರ್ಮಾಣ, ನಿರ್ವಹಣೆ ಮತ್ತು ಹಸ್ತಾಂತರ (BOT) ಅಥವಾ ನಿರ್ಮಾಣ, ಯಜಮಾನಿಕೆ, ನಿರ್ವಹಣೆ ಮತ್ತು ಹಸ್ತಾಂತರ (BOOT) ಆಧಾರದ ಮೇಲೆ ಕೈಗೊಳ್ಳಲಾಗುತ್ತಿದ್ದು, ಭೂಸ್ವಾಧೀನ ವೆಚ್ಚವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ವಂತ ಸಂಪನ್ಮೂಲದಿಂದ ಭರಿಸಲಾಗುವುದು.

ಈ) ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಭೂಸ್ವಾಧೀನ ಕಾಯ್ದೆಯಡಿ ಜಮೀನು ಸ್ವಾಧೀನ ಪಡೆದು ರಸ್ತೆಯ ಕೆಲಸವನ್ನು ಪ್ರಾರಂಭಿಸಲಾಗುವುದು ಹಾಗೂ 2010 ನೇ ಇಸವಿಯ ಒಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

1954 (2006) ಶ್ರೀ ಮೋಹನ್ ಪಿ.ಸಿ. (ಚಿಕ್ಕಪೇಟೆ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಲ ಮಂಡಳಿಗೆ ಪ್ರತಿ ದಿನ ಲೆಕ್ಕಕ್ಕೆ ಸಿಗದ ನೀರಿನ ಪ್ರಮಾಣ ಎಷ್ಟು;

ಆ) ಈ ನೀರು ಯಾವ ರೀತಿ ಪೋಲಾಗುತ್ತಿದೆ;

ಇ) ಇದರಿಂದಾಗುವ ನಷ್ಟವೆಷ್ಟು;

ಈ) ಕಳೆದ ಒಂದು ವರ್ಷದ ಅವಧಿಯಲ್ಲಿ ಈ ಲೆಕ್ಕಕ್ಕೆ ಸಿಗದ ನೀರಿನ ಪ್ರಮಾಣದಲ್ಲಿ ಇಳಿಕೆಯಾಗಿದೆಯೇ;

ಉ) ಮುಂದಿನ ದಿನಗಳಲ್ಲಿ ಈ ನೀರಿನ ಪ್ರಮಾಣವನ್ನು ಸಂಪೂರ್ಣವಾಗಿ ಉಳಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಪ್ರತಿ ದಿನ ಲೆಕ್ಕ ಸಿಗದ ನೀರಿನ ಪ್ರಮಾಣ ಸರಾಸರಿ ಶೇಕಡ 37

ಆ) **ಈ ಕೆಳಕಂಡ ರೀತಿಗಳಲ್ಲಿ ನೀರು ಪೋಲಾಗುತ್ತಿರುತ್ತವೆ.**

1) ನಗರದ ಹಳೆಯ ಪ್ರದೇಶಗಳಲ್ಲಿ ಕೊಳವೆ ಮಾರ್ಗಗಳು ಬಹಳ ಹಳೆಯದಾಗಿರುವುದರಿಂದ ತುಕ್ಕು ಹಿಡಿದು ಸವೆದಿರುವುದರಿಂದ ಭೂಮಿಯೊಳಗೆ ನೀರು ಸೋರುತ್ತಿರುವುದು.

2) ನಗರದಲ್ಲಿ ಪ್ರಮುಖ ರಸ್ತೆಗಳನ್ನು ವಿಸ್ತರಿಸುವುದರಿಂದ ಕೊಳವೆ ಮಾರ್ಗಗಳು ಮತ್ತು ಗೃಹ ಸಂಪರ್ಕಗಳು ರಸ್ತೆಯ ಮಧ್ಯ ಭಾಗಕ್ಕೂ ಬಂದು ವಾಹನ ಸಂಚಾರದ ಒತ್ತಡಕ್ಕೊಳಗಾಗಿ ಸೋರುತ್ತಿರುವುದರಿಂದ.